# ಆಂಡ್ರಿಯಾ ನುಡಿಮುತ್ತು

ಆಂಡ್ರಿಯಾ ಜೆರೆಮಿಯಾ ಚುರುಕುಮತಿ. ರಂಗಭೂಮಿಯ ನಂಟಿನಿಂದ ಬೆಳೆದ ಪ್ರತಿಭೆ. ಗಿರೀಶ ಕಾರ್ನಾಡರ 'ನಾಗಮಂಡಲ'ವನ್ನು ತಮಿಳು ನೆಲದಲ್ಲಿ ಪ್ರದರ್ಶಿಸಿದ ತಂಡದ ಭಾಗವಾದ ಚೆನ್ನೈ ಹುಡುಗಿ. ಎಂಟನೇ ವಯಸ್ಸಿನಲ್ಲಿ ಕ್ಲಾಸಿಕಲ್ ಪಿಯಾನೊ ಕಲಿತು, ಹತ್ತು ಆಗುವ ಹೊತ್ತಿಗೆ 'ಜಾಕ್ಸನ್ ಫೈವ್' ಎಂಬ ಬ್ಯಾಂಡ್ ಜತೆಗೆ ಸೇರಿ ಸ್ವರ ಸಂಯೋಜನೆ ಮಾಡಿದ ಸಂಗೀತ ಪ್ರಭೆ. ಆಂಡ್ರಿಯಾ ಶಾರೀರವೂ ಚೆನ್ನಾಗಿದೆ. ಅವರು ಹಾಡನ್ನು ರೆಕಾರ್ಡ್ ಮಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟರೆ ಲಕ್ಷೋಪಲಕ್ಷ ಜನ ಲೈಕುಗಳನ್ನು ಒತ್ತುತ್ತಾರೆ.

ಇಂತಹ ಆಂಡ್ರಿಯಾ ಭಾರತ ಚಿತ್ರರಂಗದ ನಾಯಕಿಯರ ಸ್ಥಿತಿ– ಗತಿಯ ಕುರಿತು ಫಿಲ್ಟರ್ ಹಾಕಿಕೊಳ್ಳದೆ ಮಾತನಾಡಿರುವ ವಿಡಿಯೊ ಈಗ ವೈರಲ್ ಆಗಿದೆ. 'ತಾರಾಮತಿ' ತಮಿಳು ಚಿತ್ರದಲ್ಲಿ ನಟಿಸಿದ ಮೇಲೆ ಸುದೀರ್ಘ ಕಾಲ ಅವರು ಇನ್ನೊಂದು ಸಿನಿಮಾ ಒಪ್ಪಿಕೊಂಡಿರಲಿಲ್ಲವಂತೆ. ಅದಕ್ಕೆ ಕಾರಣ, ಚಿತ್ರಕಥೆ ಬರೆಯುವವರು, ನಿರ್ದೇಶಿಸುವವರಿಗೆ ನಾಯಕಿ ಒಂದು ಫ್ಯಾನ್ಸಿ ಎಲಿಮೆಂಟ್ ಅಷ್ಟೇ ಎನ್ನುವ ಭಾವನೆ ಇದ್ದದ್ದು.

'ನಯನತಾರಾ ಮೇಡಂ ಖುದ್ದು ಪ್ರತಿಭಾವಂತೆ. ಅವರು ಸ್ಟಾರ್ ನಟರ ಜತೆ ನಟಿಸಿ ದೊಡ್ಡವರಾಗಬೇಕಾಯಿತು. ದೀಪಿಕಾ ಪಡುಕೋಣೆಗೆ ಶಾರುಖ್ ಖಾನ್ ನೆರಳಿನ ಹಂಗು. ನನಗೆ ನಟಿಯರು ಈ ರೀತಿ ಬೆಳೆಯಬೇಕಾ ಎಂಬ ಪ್ರಶ್ನೆ ಸದಾ ಕಾಡುತ್ತಾ ಇರುತ್ತದೆ. ಸೂಪರ್‌ಸ್ಟಾರ್‌ಗಳಾಗುವ ಪುರುಷರಿಗೆ ಯಾವ ತಾರಾನಟಿಯ ಹಂಗೂ ಇರುವುದಿಲ್ಲ. ಇದೇ ಯಾಕೆ ಯುವತಿಯರ ವಿಷಯದಲ್ಲಿ ಸಾಧ್ಯವಿಲ್ಲ' ಎನ್ನುವುದು ಅವರ ಅರ್ಥವತ್ತಾದ ಪ್ರಶ್ನೆ.

ನಮ್ಮ ದೇಶದ ಚಿತ್ರಕಥೆಗಳಲ್ಲಿ ಹೆಣ್ಣಿನ ಪಾತ್ರ ಸೃಜಿಸುತ್ತಿರುವ ರೀತಿಯಲ್ಲೇ ಐಬು ಇದೆ ಎಂದು ಅವರು ಸೋದಾಹರಣೆಗಳ ಸಮೇತ ಅಸ್ಖಲಿತವಾಗಿ ಹೇಳಿರುವುದನ್ನು ಕೇಳಿ ಅದೆಷ್ಟು ಜನ ಚಪ್ಪಾಳೆ ತಟ್ಟಿರುವರೋ? ಇಷ್ಟಾಗಿ ಅವರು ಕೋವಿಡ್ ದುರಿತ ಕಾಲದಲ್ಲೂ ಏಳು ಚಿತ್ರಗಳ ಭಾಗವಾಗಿರುವುದು ಮೆಚ್ಚತಕ್ಕ ಅಂಶ.



ಆಂಡ್ರಿಯಾ





ಸಿದ್ಧಾರ್ಥ್ ಮಲ್ಹೋತ್ರ, ರಶ್ಮಿಕಾ ಮಂದಣ್ಣ

# ರಶ್ಮಿಕಾಗೆ ಕದ ತೆರೆದ ಶಂತನು

ಶಂತನು ಬಾಗ್ಚಿ ಎಂಬ ಹೊಸ ನಿರ್ದೇಶಕನ ಜಾಹೀರಾತು ಮಾರುಕಟ್ಟೆ ತಂತ್ರದ ಬಲೆಗೀಗ ರಶ್ಮಿಕಾ ಮಂದಣ್ಣ ಬಿದ್ದಿದ್ದಾರೆ. ಅವರಿಗೆ ಅದುವೇ ಹಿಂದಿ ಚಿತ್ರರಂಗಕ್ಕೆ ಎಂಟ್ರಿ ಅವಕಾಶ. ಜಾಹೀರಾತು ನಿರ್ದೇಶಕನಾಗಿ ಪ್ರಶಸ್ತಿಗಳನ್ನು ಗೆದ್ದಿರುವ ಅವರ RAW ಗೋಪ್ಯ ಯೋಜನೆ ಆಧರಿಸಿದ ಚಿತ್ರಕಥೆಗೆ ರಶ್ಮಿಕಾ ನಾಯಕಿ. ರಗಡ್ ಲುಕ್‌ನಲ್ಲಿ ಸಿದ್ಧಾರ್ಥ್ ಮಲ್ಹೋತ್ರಾ ನಾಯಕನಾಗಿ ಅಭಿನಯಿಸಲಿದ್ದಾರೆ. ಬೆಂಕಿ ಹೊತ್ತಿ ಉರಿದ ಪಳೆಯುಳಿಕೆಗಳ ಮುಂದೆ ನಾಯಕನಾಗಿ ಅವರು ನಿಂತಿರುವ ಪೋಸ್ಟರ್ ಅನ್ನು ಸಿದ್ಧಾರ್ಥ್ ಸಾಮಾಜಿಕ ಜಾಲತಾಣಗಳಲ್ಲಿ ಶೇರ್ ಮಾಡಿದ್ದಾರೆ. ಇದೊಂದು ರೋಮಾಂಚನಕಾರಿ ಸಿನಿಮಾ ಆಗಲಿರುವುದರಲ್ಲಿ ಅನುಮಾನವೇ ಇಲ್ಲ ಎನ್ನುವುದು ಅವರ ಆತ್ಮವಿಶ್ವಾಸದ ನುಡಿ.

ರಾನಿ ಸ್ಕ್ರೂವಾಲಾ ನಿರ್ಮಾಪಕರು. ಉತ್ತರ–ದಕ್ಷಿಣ ಮಾರುಕಟ್ಟೆಯನ್ನು ಬೆಸೆದು ಚಿತ್ರಗಳನ್ನು ಮಾಡುವ ತಂತ್ರಗಾರಿಕೆ ಅವರಿಗೂ ಕರಗತ. ಸಿದ್ಧಾರ್ಥ್ ಮಲ್ಹೋತ್ರ ಅಭಿನಯದ ಚಿತ್ರಗಳಿಗೆ ಈಗೀಗ ದಕ್ಷಿಣ ಭಾರತದ ನಾಯಕಿಯರನ್ನು ನಿಕ್ಕಿ ಮಾಡುವುದು ರೂಢಿಯಾಗಿದೆ. 'ಅಯ್ಯಾರಿ', 'ಮರ್‌ಜಾವಾ' ಹಿಂದಿ ಸಿನಿಮಾಗಳಲ್ಲಿ ದಕ್ಷಿಣದ ಬೆಡಗಿ ರಕುಲ್ ಪ್ರೀತ್ ಸಿಂಗ್ ನಟಿಸಿದ್ದನ್ನು ಉದಾಹರಣೆಯಾಗಿ ನೋಡಬಹುದು. ತೆಲುಗು ಚಿತ್ರರಂಗದಲ್ಲಿ ದೊಡ್ಡ ಸದ್ದು ಮಾಡಿದ್ದ ರಕುಲ್, ಮೂರು ವರ್ಷಗಳಿಂದ ಬಾಲಿವುಡ್ ಓಣಿಗಳಲ್ಲಿ ಸುತ್ತಾಡುತ್ತಿದ್ದಾರೆ. ಅವರ ಪ್ರಯತ್ನಕ್ಕೆ ಸಾಕಷ್ಟು ಫಲಗಳೂ ಸಂದಿವೆ. ಸದಾ ಮೂರ್ನಾಲ್ಕು ಸಿನಿಮಾಗಳು ಕೈಗೆಟುಕುತ್ತಿವೆ. ಆಗೀಗ ತೆಲುಗು ಚಿತ್ರದಲ್ಲೂ ನಟಿಸಿ ಬಂದು, ತಮ್ಮ ಇಮೇಜನ್ನು ಕಾಪಾಡಿಕೊಳ್ಳುತ್ತಿದ್ದಾರೆ. ಈಗ ಅವರ ಹಾದಿಯಲ್ಲೇ ರಶ್ಮಿಕಾ ಸಾಗುವರೇ ಎನ್ನುವುದನ್ನು ನೋಡಬೇಕಿದೆ.

ಕನ್ನಡದಲ್ಲಿ ರಕ್ಷಿತ್ ಶೆಟ್ಟಿ ಸಿದ್ಧಮಾಡಿಕೊಟ್ಟ ಚಿಮ್ಮುಹಲಗೆಯಿಂದ ಟಾಲಿವುಡ್‌ಗೆ ಜಿಗಿದು, ಅಲ್ಲಿಂದ ಈಗ ಹಿಂದಿಗೆ ಲಗ್ಗೆಇಟ್ಟಿರುವ ಅವರ ಭವಿತವ್ಯ ಇಲ್ಲಿ ಹೇಗಿರಲಿದೆ ಎನ್ನುವುದು ಕುತೂಹಲ.

ರಶ್ಮಿಕಾ ಅಭಿನಯವಿದ್ದರೆ ದಕ್ಷಿಣದಲ್ಲಿ ಸಿನಿಮಾ ಮಾರುಕಟ್ಟೆ ಸೃಷ್ಟಿಯಾಗುತ್ತದೆ ಎನ್ನುವ ಲೆಕ್ಕಾಚಾರವನ್ನಂತೂ ಅಲ್ಲಗಳೆಯಲಾಗದು.

■ ವಿಶಾಖ ಎನ್.